ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ,
ಬೆಂಗಳೂರು-1

ಸಂಖ್ಯೆ: ಪಿ.ಆರ್.ಒ.ಶಾ.ದ.ಯೋ.1/2008-09 ದಿನಾಂಕ: 18-02-2009

# ಸುತ್ತೋಲೆ

ವಿಷಯ: "ಶಾಲಾ ಪೋಷಣೆ" ಕಾರ್ಯಕ್ರಮಕ್ಕಾಗಿ ಶಾಲಾ ಪೋಷಕರನ್ನು ಗುರುತಿಸಿ ಒಪ್ಪಂದ ಪತ್ರ (M.O.U) ಮಾಡಿಕೊಳ್ಳುವ ಬಗ್ಗೆ.

&&&

ಸರ್ಕಾರ ಮತ್ತು ಸಮುದಾಯವು ಜೊತೆಗೂಡಿ ರಾಜ್ಯದ ಸರ್ಕಾರಿ ಶಾಲೆಗಳನ್ನು ಉತ್ತಮ ಗುಣಮಟ್ಟದ ಶಿಕ್ಷಣ ಕೇಂದ್ರಗಳನ್ನಾಗಿ ರೂಪಿಸುವ ಕಾರ್ಯಕ್ರಮ *ಶಾಲೆಗಾಗಿ ನಾವು-ನೀವು.* ಸಮುದಾಯದ ಸಂಪೂರ್ಣ ಭಾಗವಹಿಸುವಿಕೆಯಿಂದ ಇಂತಹ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ. ಹಿಂದೆ ಇದ್ದ ಶಾಲಾ ದತ್ತುಯೋಜನೆ ಎಂಬ ಹೆಸರನ್ನು ಬದಲಾಯಿಸಿ *"ಶಾಲೆಗಾಗಿ ನಾವು-ನೀವು"* ಎಂಬ ಶಾಲಾ ಪೋಷಣೆ ಕಾರ್ಯಕ್ರಮ ರೂಪಿಸಿದೆ. ಈ ಕಾರ್ಯಕ್ರಮವನ್ನು ದಿನಾಂಕ: 25-02-2009 ರಂದು ಸಂಜೆ 6.00 ಗಂಟೆಗೆ ವಿಧಾನಸೌಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಉದ್ಘಾಟಿಸಲಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಹಾಗೂ ವಿವಿಧ ಇಲಾಖೆಗಳ ಸಚಿವರು ಮತ್ತು ಅಧಿಕಾರಿ ವರ್ಗದವರು ಭಾಗವಹಿಸಲಿದ್ದಾರೆ. ಸಮಾರಂಭದ ನಂತರ ಒಂದು ತಿಂಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಬ್ಲಾಕ್‌ಗಳಲ್ಲಿ ಶಾಲಾ ಪೋಷಣೆ ಕಾರ್ಯಕ್ರಮದ ಬಗ್ಗೆ ಪ್ರಚಾರವನ್ನು ಆಂದೋಲನದಂತೆ ನಡೆಸುವುದು.

ತಮ್ಮ ಬ್ಲಾಕ್‌ನ ಶಾಲೆಗಳಲ್ಲಿ ಕಲಿತು ಹೆಚ್ಚಿನ ವಿದ್ಯಾರ್ಹತೆಯನ್ನು ಪಡೆದು ಉನ್ನತ ಸ್ಥಾನದಲ್ಲಿ ಕೆಲಸ ಮಾಡುತ್ತಿರುವ ಹಾಗೂ ಸ್ವಂತ ಉದ್ಯೋಗ / ಉದ್ದಿಮೆಗಳನ್ನು ನಡೆಸುತ್ತಿರುವ ಪ್ರಗತಿಪರ ವ್ಯಕ್ತಿಗಳನ್ನು ಗುರುತಿಸಿ ಅವರ ಹೆಸರು, ಉದ್ಯೋಗ, ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ ಇತ್ಯಾದಿಗಳನ್ನು ಗ್ರಾಮದಲ್ಲಿ ನೆಲೆಸಿರುವ ಅಂತಹ ವ್ಯಕ್ತಿಗಳ ಸಂಬಂಧಿಕರಿಂದ ಅಥವಾ ಪರಿಚಿತರಿಂದ ಮಾಹಿತಿ ಪಡೆದು ಶಾಲಾವಾರು ಯಾದಿಯನ್ನು ತಯಾರಿಸಲು ಈ ಹಿಂದೆ ತಿಳಿಸಲಾಗಿತ್ತು. ಅದರಂತೆ ಅಂತಹವರನ್ನು ಸಂಪರ್ಕಿಸಿ ತಮ್ಮ ಬ್ಲಾಕ್‌ನ ಶಾಲೆಗಳನ್ನು ಪೋಷಕರು ಪೋಷಣೆಗೆ ತೆಗೆದುಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳು / ಕ್ಲಸ್ಟರ್ ಸಹಾಯಕ ಶಿಕ್ಷಣಾಧಿಕಾರಿಗಳು /ಶಾಲಾ ಮುಖ್ಯಸ್ಥರು ಕ್ರಮವಹಿಸುವುದು. ಶಾಲೆಯನ್ನು ಪೋಷಣೆಗೆ ತೆಗೆದುಕೊಳ್ಳುವವರಿಗೆ ಎಲ್ಲಾ ಸಹಕಾರ ನೀಡುವುದು. ಈ ಹಿಂದೆ ದಾನಿಗಳು ತಯಾರಿಸುವ ಕಾರ್ಯಯೋಜನೆಯನ್ನು ಅನುಮೋದಿಸುವ ಹಾಗೂ ಒಪ್ಪಂದ ಪತ್ರಕ್ಕೆ ಸಹಿ ಹಾಕುವ ಅಧಿಕಾರವನ್ನು ಜಿಲ್ಲಾ ಉಪನಿರ್ದೇಶಕರಿಗೆ ನೀಡಲಾಗಿತ್ತು. ಆದರೆ ಇನ್ನು ಮುಂದೆ ಶಾಲಾ ಪೋಷಕರೊಂದಿಗಿನ ಒಪ್ಪಂದ ಪತ್ರಕ್ಕೆ (M.O.U) ಸಹಿಮಾಡುವ ಅಧಿಕಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ನೀಡಲಾಗಿದೆ. ಶಾಲೆಗೆ ಪೋಷಕರನ್ನು ಆಯ್ಕೆ ಮಾಡಿಕೊಳ್ಳುವ ಕಾರ್ಯದಲ್ಲಿ ಸ್ಥಳೀಯ ಶಾಸಕರ / ಜಿಲ್ಲಾ ಪಂಚಾಯಿತಿ ಸದಸ್ಯರ ಮಾರ್ಗದರ್ಶನ ಪಡೆಯುವುದು.

ಆಸಕ್ತ ಉದಾರಿಗಳು ನೆರವು ನೀಡಬಹುದಾದ ಚಟುವಟಿಕೆಗಳು ಹಾಗೂ "ಒಪ್ಪಂದ ಪತ್ರ" (M.O.U) ಗಳನ್ನು ಪತ್ರದೊಂದಿಗೆ ಲಗತ್ತಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ರಾಜ್ಯದ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:-

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.

GOVERNMENT OF KARNATAKA
Department of Public Instruction

# KARNATAKA SCHOOL NURTURING PROGRAMME

## Memorandum of Understanding

(to be signed on Rs. 2 Stamp paper

This Memorandum of Understanding is entered into on this ................ day of .................. 200 , between the Department of Public Instruction represented by the Deputy Director of Public Instruction / "Block Education Officer of ..............................District /Block .......................... on the one part and ..............................represented by .............................. on the other part, hereinafter called the Donor.

Where as the Donor in collaboration with the Department of Public Instruction has desired to take up the all round improvement of the school situated in .............................. village/town, as per circular of the Commissioner of Public Instruction PRO.Shala Dattu Yojane/1/2008-09 dated 26-08-2008. and has agreed to adopt the said school as per the guidelines in the said circular by preparing a "Program of Action".

The Donor has identified the following points for preparing the "Programme of Action".

1) ............................................
2) ............................................
3) ............................................
4) ............................................
5) ............................................

The Donor and the representative of the department have together agreed to implement the "Programme of Action". All civil structures built by the Donor and all equipment provided will become part of the school property.

This Memorandum of Understanding will be valid for a period of five years. After reviewing the results of the partnership and mutual consent the MOU can be renewed for further periods of five years at a time.

This day this MOU has been read agreed and signed by both the parties.

**FOR DONOR**

**DEPUTY DIRECTOR/ BLOCK EDUCATION OFFICER**
**For Department of Public Instruction**

**Place:**

**Date:**

# ಶಾಲೆಗಳಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು

1. ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳು
    1. ಶಿಕ್ಷಕರ ಕೌಶಲ್ಯ ಮತ್ತು ಸಾಮರ್ಥ್ಯ ಅಭಿವೃದ್ಧಿ ತರಬೇತಿ– ಇಲಾಖೆಯ ನಿಯಮಗಳಿಗನುಸಾರ
    2. ಶಿಕ್ಷಕರು ಮತ್ತು ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ
    3. ಕ್ರೀಡಾ ಮೇಳ, ಸಾಂಸ್ಕೃತಿಕ ಉತ್ಸವ, ಪರಿಸರ ಶಿಬಿರ, ವಾರ್ಷಿಕೋತ್ಸವ ಕಾರ್ಯಕ್ರಮಗಳು
    4. ವ್ಯಕ್ತಿತ್ವ ವಿಕಸನ ಶಿಬಿರಗಳು
    5. ವೃತ್ತಿಪರ ಕೌಶಲ್ಯಗಳು ಹಾಗೂ ಕರಕುಶಲ ಸಾಮಗ್ರಿ ತಯಾರಿಕೆಯಲ್ಲಿ ತರಬೇತಿ ಉದಾ: ಬುಕ್ ಬೈಂಡಿಂಗ್, ಟೈಲರಿಂಗ್ . . .
    6. ಎನ್ ಎಸ್ ಎಸ್, ಎಸ್ ಸಿ ಸಿ, ಸ್ಕೌಟ್ಸ್ ಮತ್ತು ಗೈಡ್ಸ್, ವಿಜ್ಞಾನ ಕೇಂದ್ರ, ಜೂನಿಯರ್ ರೆಡ್ ಕ್ರಾಸ್ ಮುಂತಾದ ಚಳವಳಿಗಳ ಆರಂಭ

2. ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದ ಚಟುವಟಿಕೆಗಳು
    1. ಗ್ರಂಥಾಲಯ ಸ್ಥಾಪನೆ – ಸಂವಿಧಾನಾತ್ಮಕ ಮೌಲ್ಯಗಳನ್ನೊಳಗೊಂಡ ಪುಸ್ತಕಗಳು, ನೋಡಿ ಕಲಿ–ಮಾಡಿ ತಿಳಿ ಉಪಕರಣಗಳು, ದೃಶ್ಯ ಮತ್ತು ಶ್ರವ್ಯ ಸಾಮಗ್ರಿಗಳು (ಸಿಡಿಗಳನ್ನು ಹಾಕಿ ಕೇಳು ಹಾಗೂ ನೋಡಲು ಅಗತ್ಯವಾದ ಉಪಕರಣಗಳು), ಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ಇಡಲು ಬೇಕಾದ ಕಪಾಟು–ಮೇಜುಗಳು, ಮಕ್ಕಳಿಗೆ ಸೂಕ್ತವಾದ ಕುರ್ಚಿ–ಮೇಜುಗಳು, ವಿದ್ಯುತ್ ಸರಬರಾಜು ವ್ಯವಸ್ಥೆ, ಕೊಠಡಿ ಇತ್ಯಾದಿ
    2. ಪ್ರಯೋಗಾಲಯ – ಪ್ರಯೋಗ ಮಾಡುವ ಉಪಕರಣಗಳು, ಚಾರ್ಟ್‌ಗಳು, ಮಕ್ಕಳಿಗೆ ಅನುಕೂಲಕರವಾದ ಮೇಜು–ಬೆಂಚು, ಉಪಕರಣಗಳನ್ನು ಜೋಪಾನವಾಗಿ ಇಡಲು ಬೇಕಾದ ಕಪಾಟುಗಳು, ಕೊಠಡಿ ಇತ್ಯಾದಿ
    3. ಕಂಪ್ಯೂಟರ್ ಲ್ಯಾಬ್ – ಉತ್ತಮ ಸ್ಥಿತಿಯಲ್ಲಿರುವ ಕಂಪ್ಯೂಟರ್ ಗಳು, ಅದಕ್ಕೆ ಬೇಕಾದ ಕಾರ್ಯಕ್ರಮಗಳು (ಸಾಫ್ಟ್ ವೇರ್), ವಿದ್ಯುತ್ ಪೂರೈಕೆ ಹಾಗೂ ಬ್ಯಾಟರಿ, ಸಂಬಂಧಪಟ್ಟ ತರಬೇತಿಗಳು, ಕಂಪ್ಯೂಟರ್ ಶಿಕ್ಷಕರು ಇತ್ಯಾದಿ.
    4. ನೋಡಿ ತಿಳಿ–ಮಾಡಿ ಕಲಿ ವಿಧಾನಕ್ಕೆ ಹೊಂದಿಕೆಯಾಗುವಂತಹ ಕಲಿಕಾ ಸಾಮಗ್ರಿಗಳು
    5. ತರಗಳಿಗಳಿಗೆ ಬೇಕಾದ, ಮಕ್ಕಳ ವಯಸ್ಸಿಗೆ ಅನುಗುಣವಾದ ಬೆಂಚು–ಮೇಜು, ಕುರ್ಚಿ, ಕಪ್ಪುಹಲಗೆ, ನಕಾಶೆಗಳು, ಚಾರ್ಟ್‌ಗಳು, ಇತ್ಯಾದಿ

3. ಇತರೆ ಪೂರಕ ಚಟುವಟಿಕೆಗಳು
    1. ವಿದ್ಯಾರ್ಥಿ ವೇತನ, ಬಡ ಹಾಗೂ ನಿರ್ಗತಿಕ ಮಕ್ಕಳನ್ನು ದತ್ತು ಪಡೆಯುವುದು,
    2. ಶಾಲಾ ಅಂಗಳದಲ್ಲಿ ಚಿಕ್ಕ ಮಕ್ಕಳ ಸಲುವಾಗಿ ಬಾಲವಾಡಿ ನಡೆಸುವುದು – ಕೊಠಡಿ ನಿರ್ಮಾಣ, ಶಿಕ್ಷಕಿ, ಅಗತ್ಯ ಸಲಕರಣೆಗಳು ಇತ್ಯಾದಿ

4. ಶಾಲೆಗಳ ಸುತ್ತ ಮುತ್ತ ಇರುವ ಕೊಳಚೆ ಪ್ರದೇಶಗಳ ಅಭಿವೃದ್ಧಿ
5. ಅಕ್ಷರ ದಾಸೋಹದ ಮೌಲ್ಯ ವರ್ಧನೆ -- ಹೆಚ್ಚುವರಿ ತರಕಾರಿ, ಹಣ್ಣು-ಹಂಪಲು, ಬೇಳೆ-ಕಾಳು ಒದಗಿಸುವುದು, ಅಡಿಗೆ ಮಾಡುವ ಉತ್ತಮ ಸಲಕರಣೆಗಳು-ಒಲೆ, ಪಾತ್ರೆಗಳು, ತಟ್ಟೆ-ಲೋಟ, ಅಡಿಗೆ ಹಾಗೂ ಊಟದ ಕೋಣೆ ನಿರ್ಮಾಣ ಇತ್ಯಾದಿ
6. ಸಾಂಪ್ರದಾಯಿಕ ಹಬ್ಬಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಬ್ಬಗಳ ಅರ್ಥಪೂರ್ಣ ಆಚರಣೆ
7. ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವ ಆಶಾಕಿರಣ ಯೋಜನೆಗೆ ಸಹಕಾರ
8. ಅಂಗವಿಕಲ ಮಕ್ಕಳ ಗೃಹ ಆಧಾರಿತ ಶಿಕ್ಷಣಕ್ಕೆ ನೆರವು – ಅಂತಹ ಮಕ್ಕಳಿಗೆ ಬೇಕಾದ ವಿಶೇಷ ಸಲಕರಣೆಗಳು, ವೈದ್ಯಕೀಯ ಸೌಲಭ್ಯ, ಈ ಮಕ್ಕಳಿಗೆ ಕಲಿಸುವ ಸ್ವಯಂ ಸೇವಕರಿಗೆ ವಿಶೇಷ ತರಬೇತಿಗಳನ್ನು ಆಯೋಜಿಸುವುದು, ಸ್ವಯಂ ಸೇವಕರಾಗಿ ಕೆಲಸ ಮಾಡುವುದು

4. ಕಟ್ಟಡ ನಿರ್ಮಾಣ ಸಂಬಂಧಿ ಚಟುವಟಿಕೆಗಳು

1. ಶಾಲಾ ಕೊಠಡಿ, ಸಭಾಂಗಣ, ಸೈಕಲ್ ಸ್ಟ್ಯಾಂಡ್, ಧ್ವಜ ಸ್ಥಂಭ, ಇತ್ಯಾದಿ
2. ಕುಡಿಯುವ ನೀರಿನ ಸೌಲಭ್ಯ – ನೀರಿನ ಟ್ಯಾಂಕ್, ನಲ್ಲಿ ನೀರು ಪೂರೈಕೆ, ನೀರಿನ ಸಂಗ್ರಹಣೆ ವ್ಯವಸ್ಥೆ ಇತ್ಯಾದಿ
3. ಅಡುಗೆ ಕೋಣೆ – ಕೊಠಡಿ, ಅಕ್ಕಿ-ಬೇಳೆ-ತರಕಾರಿ ಇತ್ಯಾದಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ವ್ಯವಸ್ಥೆ, ನೀರಿನ ವ್ಯವಸ್ಥೆ, ಕೈ ಬಚ್ಚಲು, ಕಸ ವಿಲೇವಾರಿ ವ್ಯವಸ್ಥೆ
4. ಶೌಚಾಲಯ – ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳು, ನೀರಿನ ಸೌಲಭ್ಯ, ಕೈ ಕಾಲು ತೊಳೆಯುವ ವ್ಯವಸ್ಥೆ, ಶೌಚಾಲಯ ಶುಚಿಗೊಳಿಸುವ ಸಾಮಗ್ರಿಗಳು ಇತ್ಯಾದಿ
5. ರಕ್ಷಣಾ ಗೋಡೆ – ನೈಸರ್ಗಿಕ ಬೇಲಿಗಳು, ತಂತಿ ಬೇಲಿ, ಗೋಡೆ ಇತ್ಯಾದಿ
6. ಆಟದ ಮೈದಾನ – ವಿವಿಧ ಆಟಗಳಿಗೆ ಸೂಕ್ತವಾದ ಮೈದಾನ, ಕ್ರೀಡಾ ಸಾಮಗ್ರಿಗಳು, ವಿಶೇಷ ತರಬೇತಿಗಳು
7. ಶಾಲಾ ಕೈತೋಟ ಮತ್ತು ತರಕಾರಿ ತೋಟ ಬೆಳೆಸುವುದು

ಈ ಪಟ್ಟಿಯಲ್ಲಿರುವುದು ಕೇವಲ ಸಲಹೆ ಮಾತ್ರ. ನಿಮ್ಮ ಪರಿಣತಿ ಮತ್ತು ನಿಮ್ಮ ಅನುಭವಗಳು ಇದಕ್ಕಿಂತಲೂ ಅಮೂಲ್ಯವಾದ ಕೊಡುಗೆಗಳನ್ನು ನೀಡಬಹುದು.

☆☆☆